**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಕೇಸ್ ನಂ.49/2024**

ಪ್ರಾ.ಸಾ. 11

ಚಾ.ಸಾ. 14

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 07.11.2025**

| | |
|---|---|
| ಸಾಕ್ಷಿದಾರರ ಹೆಸರು | ಡಾ.ರವಿಶಂಕರ್.ಎಂ. |
| ತಂದೆಯ ಹೆಸರು | ಎಂ.ಮಹದೇವಸ್ವಾಮಿ |
| ವಯಸ್ಸು | 45 ವರ್ಷ |
| ಉದ್ಯೋಗ | ಹಿರಿಯ ತಜ್ಞರು, ಮಧುಗಿರಿ ತಾಲ್ಲೂಕು ಆಸ್ಪತ್ರೆ |
| ವಾಸ | ಮಧುಗಿರಿ |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು 22.09.2021 ರಿಂದ 14.07.2025 ರವರೆಗೆ ನಾನು ಮದ್ದೂರು ತಾಲ್ಲೂಕು ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

.

.2. ದಿನಾಂಕ 15.03.2023 ರಂದು ಕೆಸ್ತೂರು ಪೊಲೀಸರು ಸತೀಶ್, ಉಮೇಶ ಮತ್ತು ವಿನಯ್ ಕುಮಾರ್ ಎಂಬ ಮೂರು ಜನರನ್ನು ಮದ್ದೂರು ಸರ್ಕಾರಿ ಆಸ್ಪತ್ರೆಗೆ ಮದ್ಯಾಹ್ನ 12.10 ಸಮಯದಲ್ಲಿ ಕರೆದುಕೊಂಡು ಬಂದಿದ್ದರು. ಆ ಮೂರು ಜನರ ರಕ್ತದ ಮಾದರಿಯನ್ನು ಸಂಗ್ರಹಿಸಿ ರಕ್ತದ ಗುಂಪನ್ನು ತಿಳಿಸಿ

ವರದಿ ಕೊಡುವಂತೆ ಕೇಳಿಕೊಂಡರು. ನಾನು ಅವರ ಮನವಿಯಂತೆ ಆ ಮೂರೂ ಜನರನ್ನು ನಮ್ಮ ಲ್ಯಾಬಿನಲ್ಲಿ ರಕ್ತವನ್ನು ಸಂಗ್ರಹಿಸಿ, ಅವರ ರಕ್ತದ ಗುಂಪನ್ನು ಗುರುತಿಸಿ ಆ ಬಾಬ್ತು ಅವರ ರಕ್ತದ ಗುಂಪು ಯಾವುದು ಎಂದು ಪ್ರಮಾಣ ಪತ್ರವನ್ನು ನೀಡಿದ್ದೇನೆ. ಸತೀಶ ರವರ ರಕ್ತದ ಗುಂಪು O+ve, ಉಮೇಶರವರ ರಕ್ತದ ಗುಂಪು A+ve ಮತ್ತು ವಿನಯ್ ಕುಮಾರ್ ರವರ ರಕ್ತದ ಗುಂಪು A+ve. ಅವರ ರಕ್ತದ ಗುಂಪನ್ನು ವರ್ಗೀಕರಿಸಿ ನಾನು ಪ್ರಮಾಣ ಪತ್ರವನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸಾಕ್ಷಿ ಸದರಿ ಮೂರುೂ ವ್ಯಕ್ತಿಗಳ ರಕ್ತದ ಗುಂಪಿನ ಬಾಬ್ತು ನೀಡಿದ ಕಡತದಲ್ಲಿರುವ ಜೆರಾಕ್ಸ್ ಪ್ರತಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.20 ಎಂದು ಸಾಕ್ಷಿಯ ಸಹಿಯನ್ನು ನಿಪಿ.20 ಎ, ನಿಪಿ.21 ಎಂದು ಸಾಕ್ಷಿಯ ಸಹಿಯನ್ನು ನಿಪಿ.21 ಎ ಎಂದು ಮತ್ತು 22 ಎಂದು ಸಾಕ್ಷಿಯ ಸಹಿಯನ್ನು ನಿಪಿ.22 ಎ ಎಂದು ಗುರುತಿಸಲಾಯಿತು.

.

**ಪಾಟೀ ಸವಾಲುಃ *2* ರಿಂದ *5* ನೇ ಆರೋಪಿತರ ಪರ ಶ್ರೀ ಎಸ್‌ಪಿ ಎಸ್ ವಕೀಲರಿಂದಃ**

1. ಪೊಲೀಸರು ಸದರಿ ಮೂರೂ ಜನರ ರಕ್ತ ಗುಂಪು ವರ್ಗಿಕರಿಸಲು ಪ್ರತ್ಯೇಕ ಮನವಿ ನೀಡಿಲ್ಲ, ಓಪಿಡಿ ಪತ್ರ ನೀಡಿದ್ದರು. ಯಾವುದೋ ಒಂದು ಕ್ರಿಮಿನಲ್ ಪ್ರಕರಣದ ಬಾಬ್ತು ಇವರ ರಕ್ತದ ಗುಂಪು ಬೇಕಾಗಿತ್ತು ಎಂದು ಹೇಳಿದ್ದರಿಂದ ವರ್ಗೀಕರಿಸಿ ನೀಡಿದ್ದೇನೆ. ಆ ಮೂರೂ ಜನರ ಗುರುತಿನ ಚೀಟಿಯನ್ನು ನಾನು ಪರಿಶೀಲಿಸಿಲ್ಲ. ಓಪಿ ಸ್ಲಿಪ್ ನಲ್ಲಿ ಅವರ ನಮೂದು ಇದ್ದ ಕಾರಣ ಆ ಹೆಸರಿನವರ ರಕ್ತದ ಗುಂಪು ಎಂದು ಪ್ರಮಾಣ ಪತ್ರ ನೀಡಿದ್ದೇನೆ. ಆ ಮೂರೂ ಜನರನ್ನು ನಾನು ವಿಚಾರಣೆ ಮಾಡಿಲ್ಲ. ಪೊಲೀಸರ ಮೌಖಿಕ ಮನವಿಯ ಮೇರೆಗೆ ನಾನು ರಕ್ತದ ಗುಂಪನ್ನು ವರ್ಗೀಕರಿಸಿದ್ದೇನೆಂದರೆ ಸರಿ. ಓಪಿಡಿ ಸ್ಲಿಪ್ ಅನ್ನು ನಾನು ಕೂಲಂಕುಷವಾಗಿ ಪರಿಶೀಲನೆ ಮಾಡಿರುತ್ತೇನೆ. ಓಪಿಡಿ ಸ್ಲಿಪ್ ನಲ್ಲಿ ಪ್ರಕರಣದ ಮಾಹಿತಿ ಇರಲಿಲ್ಲ ಎಂದರೆ ಸರಿ. ಓಪಿಡಿ ಸ್ಲಿಪ್ ನಲ್ಲಿ ಆರೋಪಿಗಳ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ನಾನು ಯಾವುದೇ ಬ್ಲಡ್ ಗ್ರೂಪ್ ಮಾಡಿಲ್ಲ, ಈ ಪ್ರಕರಣಕ್ಕೋಸ್ಕರ ದಾಖಲೆಗಳನ್ನು ಸೃಷ್ಟಿಸಿ ನೀಡಿದ್ದೇನೆಂದರೆ

ಸರಿಯಲ್ಲ. ವೈದ್ಯಕೀಯ ಮಾನದಂಡಗಳಿಗೆ ಅನುಸಾರವಾಗಿ ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.